

بِسۡمِ اللّٰہِ الرَّحۡمٰنِ الرَّحِیۡمِ

# ಸುಳ್ಳು ಹೇಳುವುದು ಬಹುದೇವಾರಾಧನೆಗೆ ಸಮ ಅಹಂಭಾವ ಶೈತಾನನ ಸ್ವಭಾವ. ಈ ದುಸ್ವಭಾವಗಳಿಂದ ದೂರವಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **16-06-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ನಾನು ಹೇಳಿದ್ದೆ ತಖ್ವವನ್ನು ಹೊಂದಲು ಸದ್ಗುಣಗಳು ಆವಶ್ಯಕವಾಗಿವೆ ಎಂದು. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿರುವರು: ಒಬ್ಬ ಮನುಷ್ಯನು ಮುತ್ತಖಿ ಆಗುವುದು ಅವನಲ್ಲಿ ಎಲ್ಲ ಸದ್ಗುಣಗಳು ಇರುವಾಗ ಮಾತ್ರವಾಗಿದೆ. ಆದುದರಿಂದ ಸತ್ಯವಿಶ್ವಾಸಿಯಾದವನು ಎಲ್ಲ ಸದ್ಗುಣಗಳನ್ನು ಹೊಂದಲು ಪ್ರಯತ್ನಿಸಬೇಕು. ಆಗ ಅವನಲ್ಲಿ ಉನ್ನತ ಸ್ವಭಾವಗುಣಗಳು ಹುಟ್ಟುತ್ತವೆ. ಅವು ಒಬ್ಬ ಮುತ್ತಖಿಗೆ ಆವಶ್ಯಕವಾಗಿವೆ. ಆದರೆ ಕೆಲವು ಸ್ವಭಾವಗುಣಗಳು ಹೇಗಿವೆ ಎಂದರೆ ಅವು ಒಬ್ಬ ಸತ್ಯವಿಶ್ವಾಸಿಯಲ್ಲಿ ಇಲ್ಲವಾದರೆ ಅವನ ವಿಶ್ವಾಸದ ಮಟ್ಟವೂ ಆಕ್ಷೇಪಾರ್ಹವಾಗುತ್ತದೆ. ಇಂತಹ ಸದ್ಗುಣಗಳಲ್ಲಿ ಎಲ್ಲಕ್ಕಿಂತ ಪ್ರಮುಖವಾದುದು ಸುಳ್ಳು ಹೇಳುವುದರಿಂದ ರಕ್ಷಿಸಿಕೊಳ್ಳುವುದಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: فَاجۡتَنِبُوا الرِّجۡسَ مِنَ الۡاَوۡثَانِ وَاجۡتَنِبُوۡا قَوۡلَ الزُّوۡرِ **ಫಜ್‌ತನಿಬುರ್ರಿಜ್‌ಸ ಮಿನಲ್‌ಅವ್‌ಸಾನಿ ವಜ್‌ತನಿಬೂ ಖೌಲಝ್ಝೂರ್.** ವಿಗ್ರಹಾರಾಧನೆಯ ಕೆಡುಕಿನಿಂದ ನೀವು ದೂರವಿರಿ. ಸುಳ್ಳು ಹೇಳುವುದರಿಂದಲೂ ದೂರವಿದ್ದುಕೊಳ್ಳಿರಿ. (ಪವಿತ್ರ ಖುರ್‌ಆನ್ 22:31). ವಿಗ್ರಹಗಳನ್ನು ಆರಾಧಿಸುವುದು ಮತ್ತು ಸುಳ್ಳು ಹೇಳುವುದು ಇವುಗಳನ್ನು ಒಟ್ಟಿಗೆ ಸೇರಿಸಿ ಹೇಳುವುದರ ಮೂಲಕ ಸ್ಪಷ್ಟಪಡಿಸಿರುವುದೇನೆಂದರೆ, ನಿಮ್ಮಲ್ಲಿ ಸತ್ಯ ಮತ್ತು ಸತ್ಯ ಹೇಳುವ ಸ್ವಭಾವಗುಣ ಇಲ್ಲದಿದ್ದರೆ ಇದು ವಿಗ್ರಹಾರಾಧನೆ ಮಾಡುವ ಹಾಗಿರುವ ದೊಡ್ಡ ಪಾಪಕರ್ಮವಾಗಿದೆ. ಒಬ್ಬ ಸತ್ಯವಿಶ್ವಾಸಿ ಅಲ್ಲಾಹನ ಏಕತ್ವದ ಬಗ್ಗೆ ದೃಢನಂಬಿಕೆ ಹೊಂದಿರುವಾಗ ಬಹಿರಂಗ ಅಥವಾ ರಹಸ್ಯ ವಿಗ್ರಹಗಳ ಆರಾಧನೆಯ ಕೊಳಕಿನಲ್ಲಿ ಸಹ ಸಿಲುಕಿಕೊಳ್ಳುವುದು ಅಸಂಭಾವ್ಯವಾಗಿದೆ.

ಇದು ಬಹಳ ದೊಡ್ಡ ಸ್ಪಷ್ಟ ಎಚ್ಚರಿಕೆಯಾಗಿದೆ. ತಾನು ವಿಶ್ವಾಸಿ ಎಂದು ವಾದಿಸುವ ಒಬ್ಬನು ಸತ್ಯವಿಶ್ವಾಸಿಯಾಗಿದ್ದರೆ ಅವನು ಸತ್ಯ ಹೇಳುವುದರ ಉನ್ನತ ಮಟ್ಟವನ್ನು ತನ್ನಲ್ಲಿ ಅಳವಡಿಸಬೇಕು. ಹೀಗೆ ಮಾಡುವುದಿಲ್ಲವಾದರೆ ನಿಮ್ಮ ವಿಶ್ವಾಸದ ಬಗ್ಗೆ ಚಿಂತಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದಕ್ಕೆ ಸಂಬಂಧಿಸಿ ಬಹಳ ನೋವನ್ನು ಪ್ರಕಟಿಸಿದ್ದಾರೆ. ಪ್ರತಿಯೊಬ್ಬ ಅಹ್ಮದಿ ಪ್ರತಿ ಸಮಯದಲ್ಲಿ ಇದನ್ನು ತನ್ನೆದುರಿಗೆ ಇರಿಸುವುದು ಆವಶ್ಯಕವಾಗಿದೆ. ನಾವು ಆ ಮೂಲಕ ನಮ್ಮ ವಿಶ್ವಾಸವನ್ನು ಬಲಿಷ್ಠಗೊಳಿಸುತ್ತಾ ತಖ್ವದ ಕಡೆಗೆ ಸಾಗುವವರಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ಪವಿತ್ರ ಖುರ್‌ಆನ್ ಸುಳ್ಳು ಹೇಳುವುದನ್ನು ವಿಗ್ರಹಾರಾಧನೆಗೆ ಸಮವೆಂದು ಹೇಳಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: فَاجۡتَنِبُوا الرِّجۡسَ مِنَ الۡاَوۡثَانِ وَاجۡتَنِبُوۡا قَوۡلَ الزُّوۡرِ **ಫಜ್‌ತನಿಬುರ್ರಿಜ್‌ಸ ಮಿನಲ್‌ಅವ್‌ಸಾನಿ ವಜ್‌ತನಿಬೂ ಖೌಲಝ್ಝೂರ್.** ಎಂದರೆ ವಿಗ್ರಹಗಳ ಕೊಳಕು ಮತ್ತು ಸುಳ್ಳು ಹೇಳುವುದರ ಕೊಳಕಿನಿಂದ ನಿಮ್ಮನ್ನು ರಕ್ಷಿಸಿರಿ. ಸುಳ್ಳು ಹೇಳುವುದು ಸಹ ಒಂದು ವಿಗ್ರಹವಾಗಿದೆ. ಅದರ ಮೇಲೆ ಭರವಸೆ ಇಡುವವನು ಅಲ್ಲಾಹನ ಮೇಲಿನ ಭರವಸೆಯನ್ನು ಬಿಟ್ಟುಬಿಡುತ್ತಾನೆ. ಆದುದರಿಂದ ಸುಳ್ಳು ಹೇಳುವುದರ ಕಾರಣದಿಂದ ಏಕದೇವ ವಿಶ್ವಾಸವೂ ನಷ್ಟವಾಗುತ್ತದೆ. ಆದುದರಿಂದ ಮನುಷ್ಯನು ಪರಿಶುದ್ಧನಾಗಲಿಕ್ಕೆ ಸುಳ್ಳು ಮತ್ತು ಪ್ರತಿಯೊಂದು ರೀತಿಯ ಶಿರ್ಕ್‌ನಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾದುದು ಆವಶ್ಯಕವಾಗಿದೆ.

"ಸುಳ್ಳನ್ನು ವಿಗ್ರಹದ ಎದುರಿಗೆ ಇರಿಸಲಾಗಿದೆ. ವಾಸ್ತವಿಕವಾಗಿ ಸುಳ್ಳು ಸಹ ಒಂದು ವಿಗ್ರಹವಾಗಿದೆ. ಹಾಗಲ್ಲವಾದರೆ ಸತ್ಯವನ್ನು ಬಿಟ್ಟು ಬೇರೆಡೆಗೆ ಹೋಗುವುದು ಏಕೆ? ಸುಳ್ಳು ಹೇಳುವವನ ಬಗ್ಗೆ ವಿಶ್ವಾಸ ಎಷ್ಟು ಕಡಿಮೆಯಾಗುತ್ತದೆ ಎಂದರೆ ಅವನು ಸತ್ಯ ಹೇಳಿದರೂ ಅದರಲ್ಲಿ ಸುಳ್ಳು ಮಿಶ್ರವಾಗಿರಬಹುದೆಂದು ಜನರು ಯೋಚಿಸುತ್ತಾರೆ. ಸುಳ್ಳು ಹೇಳುವವರು ತಮ್ಮ ಸುಳ್ಳು ಹೇಳುವಿಕೆ ಕಡಿಮೆಯಾಗಬೇಕೆಂದು ಇಚ್ಛಿಸುವುದಾದರೆ ಅದು ಬೇಗನೆ ದೂರ ಸರಿಯಲಾರದು. ದೀರ್ಘಕಾಲ ಸತ್ಯ ಹೇಳುವ ಅಭ್ಯಾಸವನ್ನು ಮಾಡಿದ ನಂತರ ಮಾತ್ರ ಸತ್ಯ ಹೇಳುವ ಅಭ್ಯಾಸ ಅವರಲ್ಲಿ ಹುಟ್ಟುವುದು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಅವಿವೇಕಿಯಾದ ಮನುಷ್ಯನು ಯಾವ ರೀತಿ ಅಲ್ಲಾಹನನ್ನು ಬಿಟ್ಟು ವಿಗ್ರಹಗಳ ಕಡೆಗೆ ತಲೆಬಾಗುವನೋ ಹಾಗೆಯೇ ಸತ್ಯವನ್ನು ಬಿಟ್ಟು ತನ್ನ ಸ್ವಾರ್ಥ ಉದ್ದೇಶಕ್ಕೋಸ್ಕರ ಸುಳ್ಳನ್ನು ತನ್ನ ಆರಾಧನೆಯ ವಿಗ್ರಹವನ್ನಾಗಿ ಮಾಡಿಕೊಳ್ಳುತ್ತಾನೆ. ಸುಳ್ಳನ್ನು ತಮ್ಮ ಜೀವಿತದ ಉದ್ದೇಶವನ್ನಾಗಿ ಮಾಡಿಕೊಳ್ಳುವುದಕ್ಕಿಂತ ದೊಡ್ಡ ದುರದೃಷ್ಟಕರವಾದುದು ಬೇರೆ ಏನಿದೆ? ನಾನು ನಿಮಗೆ ದೃಢಪಡಿಸಿ ಕೊಡುತ್ತೇನೆ ಅಂತಿಮವಾಗಿ ಸತ್ಯವೇ ಜಯಿಸುವುದೆಂದು. ಒಳಿತು ಮತ್ತು ವಿಜಯ ಅದಕ್ಕೆ ಮಾತ್ರ ಲಭಿಸುವುದಾಗಿದೆ. ನೀವು ದೃಢವಾಗಿ ನೆನಪಿಟ್ಟುಕೊಳ್ಳಿರಿ. ಸುಳ್ಳಿನ ಹಾಗಿರುವ ಕೆಟ್ಟ ವಸ್ತು ಬೇರೊಂದಿಲ್ಲ. ಸಾಮಾನ್ಯವಾಗಿ ಜನರು ಹೇಳುತ್ತಾರೆ ಸತ್ಯ ಹೇಳುವವನು

ಸೆರೆ ಹಿಡಿಯಲ್ಪಡುತ್ತಾನೆಂದು. ಆದರೆ ನಾನು ಅವರ ಮಾತನ್ನು ಹೇಗೆ ತಾನೆ ಅಂಗೀಕರಿಸಲು ಸಾಧ್ಯ? ನನ್ನ ವಿರುದ್ಧ ಏಳು ಮೊಕದ್ದಮೆಗಳು ಹೂಡಲ್ಪಟ್ಟವು. ಆದರೆ ಅಲ್ಲಾಹನ ಅನುಗ್ರಹದಿಂದ ಒಂದು ಮೊಕದ್ದಮೆಯಲ್ಲಿ ಸಹ ಒಂದು ಸುಳ್ಳನ್ನಾದರೂ ಬರೆಯುವ ಆವಶ್ಯಕತೆ ಉಂಟಾಗಲಿಲ್ಲ. ಅಲ್ಲಾಹನು ಸ್ವತಃ ಸತ್ಯಕ್ಕೆ ಬೆಂಬಲವನ್ನೂ ಸಹಾಯವನ್ನೂ ನೀಡುವವನಾಗಿದ್ದಾನೆ. ಸತ್ಯವಂತನಾದವನನ್ನು ಅಲ್ಲಾಹನು ಶಿಕ್ಷಿಸುವನೇ? ಹಾಗೆ ಶಿಕ್ಷಿಸುವುದಾದರೆ ಲೋಕದಲ್ಲಿ ಒಬ್ಬ ಸಹ ಸತ್ಯ ಹೇಳಲು ಧೈರ್ಯ ತೋರಿಸಲಾರನು. ಮತ್ತು ಅಲ್ಲಾಹನ ಬಗ್ಗೆ ಸತ್ಯವಾದ ನಂಬಿಕೆ ಇಲ್ಲವಾಗುವುದು. ಸತ್ಯವಾದಿ ಬದುಕಿರುವಾಗಲೇ ಸಾಯುವನು.

ವಾಸ್ತವಿಕ ವಿಷಯವೇನೆಂದರೆ ಸತ್ಯ ಹೇಳುವ ಕಾರಣದಿಂದ ಶಿಕ್ಷೆಗೆ ಗುರಿಯಾಗುವವನು ಸತ್ಯ ಹೇಳಿದ ಕಾರಣದಿಂದಲ್ಲ ಶಿಕ್ಷಿಸಲ್ಪಡುವುದು. ಆ ಶಿಕ್ಷೆ ಅವನ ಅತ್ಯಂತ ರಹಸ್ಯಮಯವಾದ ಬೇರೆ ಯಾವುದೋ ಕೆಟ್ಟ ಕೆಲಸಗಳ ಕಾರಣದಿಂದ ಲಭಿಸುವುದಾಗಿರುತ್ತದೆ. ಅಲ್ಲಾಹನ ಬಳಿಯಲ್ಲಿ ಅಂತಹ ಜನರ ಕೆಟ್ಟ ಕೆಲಸಗಳ ಮತ್ತು ಉದ್ದಟತನದ ಪಟ್ಟಿಯೇ ಇರುತ್ತದೆ. ಅವರು ಅನೇಕ ತಪ್ಪುಗಳನ್ನು ಮಾಡಿರುತ್ತಾರೆ. ಅವರು ಮಾಡಿರುವ ಯಾವುದಾದರೊಂದು ತಪ್ಪಿನ ಕಾರಣದಿಂದ ಶಿಕ್ಷಿಸಲ್ಪಡುತ್ತಾರೆ. ಆದುದರಿಂದ ಸ್ಥಿರವಾಗಿ ಒಳಿತುಗಳನ್ನು ಮಾಡಬೇಕು. ಒಳಿತುಗಳನ್ನು ಮಾಡುವ ಅಭ್ಯಾಸ ಮಾಡಿಕೊಳ್ಳಬೇಕು. ಮನುಷ್ಯನು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಿ ಕೆಡುಕಿನಿಂದ ತನ್ನನ್ನು ರಕ್ಷಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದರೆ, ಅದರಲ್ಲಿ ಸ್ಥಿರವಾಗಿ ನೆಲೆ ನಿಲ್ಲಲು ಪ್ರಯತ್ನ ಮಾಡಿದರೆ ಅದು ಸಾಧ್ಯವಾಗುವುದು.

ಲೋಕದ ಜನರ ಸ್ಥಿತಿ ಹೇಗಾಗಿದೆ ಎಂದರೆ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ, ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಸಹ ಅವರು ಸುಳ್ಳು ಹೇಳುತ್ತಾರೆ. ಇತ್ತೀಚೆಗೆ ನ್ಯಾಶನಲ್ ಜೋಗ್ರಾಫಿಕ್ ಮ್ಯಾಗಝಿನ್‌ನಲ್ಲಿ ಒಂದು ಲೇಖನ ಪ್ರಕಟವಾಗಿತ್ತು. ಸುಳ್ಳು ಹೇಳುವುದರ ಬಗ್ಗೆ ಒಂದು ಸಂಶೋಧನಾತ್ಮಕ ದೀರ್ಘ ಲೇಖನ ಅದರಲ್ಲಿ ಪ್ರಕಟಿಸಲಾಗಿತ್ತು. ಅವರು ಮಾಡಿದ ಸರ್ವೇಕ್ಷಣೆಯಿಂದ ತಿಳಿದು ಬಂದಿರುವುದು: ಪ್ರತಿಯೊಬ್ಬನು ಪ್ರತಿದಿನ ಕನಿಷ್ಟ ಮೂರು ನಾಲ್ಕು ಸುಳ್ಳು ಹೇಳುತ್ತಾನೆ. ಸುಳ್ಳು ವಿವಿಧ ರೀತಿಗಳಲ್ಲಿರುತ್ತವೆ. ಯಾರಿಗಾದರೂ ಮಾರ್ಗದರ್ಶನ ನೀಡಬೇಕಾಗಿರುವಾಗ ಸರಿಯಾದ ಮಾರ್ಗದರ್ಶನ ನೀಡದೆ ಸುಳ್ಳು ಹೇಳಲಾಗುತ್ತದೆ. ಕೆಲವರನ್ನು ಮೋಸಗೊಳಿಸಲು ಸುಳ್ಳು ಹೇಳಲಾಗುತ್ತದೆ. ತನ್ನ ಬಲಹೀನತೆಗಳನ್ನು ಮರೆಮಾಚಲು ಸುಳ್ಳು ಹೇಳಲಾಗುತ್ತದೆ. ತನ್ನ ಬಗ್ಗೆ ತಪ್ಪು ಅಭಿಪ್ರಾಯ ಉಂಟುಮಾಡಲು ಸುಳ್ಳು ಹೇಳಲಾಗುತ್ತದೆ. ತನ್ನಿಷ್ಟಪ್ರಕಾರ ಕೆಲಸಮಾಡಲು ಸುಳ್ಳು ಹೇಳಲಾಗುತ್ತದೆ. ಇವು ಚಿಕ್ಕಪುಟ್ಟ ಸುಳ್ಳುಗಳಾಗಿವೆ. ದೊಡ್ಡ ದೊಡ್ಡ ಸುಳ್ಳುಗಳ ಬಗ್ಗೆ ಲೇಖಕ ವಿವರಿಸುತ್ತಾ ಹೇಳುತ್ತಾನೆ. ಪತಿ ಮತ್ತು ಪತ್ನಿ ಅನ್ಯರೊಂದಿಗೆ ಹೊಂದಿರುವ ತಮ್ಮ ಸಂಬಂಧಗಳನ್ನು ಮರೆ ಮಾಡಲು ಸುಳ್ಳು ಹೇಳುತ್ತಾರೆ. ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಪತಿ ಮತ್ತು ಪತ್ನಿಯ ಪ್ರೇಮ ಸಂಬಂಧ ತಪ್ಪಾದ ರೀತಿಯಲ್ಲಿ ನಡೆಯುವಾಗ ಸುಳ್ಳು ಹೇಳುತ್ತಾರೆ. ಆದರೆ ಸುಳ್ಳು ಹೇಳಿಕೆಯ ಪೊಳ್ಳುತನ ಬಹಿರಂಗವಾಗುವಾಗ ಜಗಳಗಳು ಪ್ರಾರಂಭವಾಗುತ್ತವೆ. ಅನಂತರ ಬೇರೆ ಬೇರೆ ವಾಸ ಮತ್ತು ವಿವಾಹ ವಿಚ್ಛೇದನಗಳು ಸಹ ಸಂಭವಿಸುತ್ತವೆ.

ನಮ್ಮ ಜಮಾಅತ್‌ನಲ್ಲಿ ಸಹ ತಲಾಖ್ ಮತ್ತು ಖುಲಅ್ ಸಂಭವಿಸುವ ಬಗ್ಗೆ ಪರಿಶೋಧಿಸುವುದಾದರೆ ಸುಳ್ಳಿನ ಸಹಾಯ ಪಡೆದ ಕಾರಣ ಅವು ಸಂಭವಿಸುತ್ತವೆ. ಈ ಮೂಲಭೂತ ಮಾನಸಿಕ ಸ್ಥಿತಿಯನ್ನು ಮನವರಿಕೆ ಮಾಡಿಕೊಂಡು ನಿಕಾಹ್ ಸಂದರ್ಭದಲ್ಲಿ ತಿಲಾವತ್ ಮಾಡಬೇಕೆಂದು ಆಜ್ಞಾಪಿಸಲಾದ ಪವಿತ್ರ ಖುರ್‌ಆನ್ ವಚನಗಳಲ್ಲಿ ಈ ಕೆಳಗಿನ ವಚನ ಸೇರಿದೆ: يَا أَيُّهَا الَّذِينَ آمَنُوا اتَّقُوا اللَّهَ وَقُولُوا قَوْلًا سَدِيدًا **ಯಾ ಅಯ್ಯುಹಲ್ಲಝೀನ ಆಮನುತ್ತಖುಲ್ಲಾಹ ವ ಖೂಲೂ ಖೌಲನ್ ಸದೀದ.** ಓ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ನೇರವಾದ ಮಾತುಗಳನ್ನಾಡಿರಿ. (33:71). ಅನಂತರ ಅಲ್ಲಾಹನು ಹೇಳುತ್ತಾನೆ: يُصْلِحْ لَكُمْ أَعْمَالَكُمْ وَيَغْفِرْ لَكُمْ ذُنُوبَكُمْ ۗ وَمَن يُطِعِ اللَّهَ وَرَسُولَهُ فَقَدْ فَازَ فَوْزًا عَظِيمًا **ಯುಸ್‌ಲಿಹ್ ಲಕುಮ್ ಅಅ್‌ಮಾಲಕುಮ್ ವ ಯಗ್‌ಫಿರ್ ಲಕುಮ್ ದುನೂಬಕುಮ್ ವಮನ್ ಯುತಿಇಲ್ಲಾಹ ವ ರಸೂಲಹೂ ಫಖದ್ ಫಾಝು ಫೌಝುನ್ ಅಝೀಮ.** (ಹಾಗೆ ಮಾಡಿದರೆ) ಅಲ್ಲಾಹನು ನಿಮ್ಮ ಕೃತ್ಯಗಳನ್ನು ನಿಮಗೆ ಉತ್ತಮಗೊಳಿಸುವನು. ನಿಮ್ಮ ಪಾಪಗಳನ್ನು ಕ್ಷಮಿಸುವವನು. ಯಾರು ಅಲ್ಲಾಹನನ್ನೂ ಅವನ ಸಂದೇಶವಾಹಕನನ್ನೂ ಅನುಸರಿಸುತ್ತಾನೋ ಅವನು ಖಂಡಿತವಾಗಿಯೂ ಯಶಸ್ಸು ಗಳಿಸುವನು. (33:72).

ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಪರದೆ ಕೊನೆಗೊಳಿಸಲ್ಪಡುವಾಗ ಅನಂತರ ಸಂಶಯಗಳು ತಲೆದೋರುತ್ತವೆ. ಹಾಗೆ ಪರಸ್ಪರ ಅವಿಶ್ವಾಸ ಉಂಟಾಗುತ್ತದೆ. ಅನಂತರ ಸುಳ್ಳಿನ ಸಹಾಯ ಪಡೆಯಲಾಗುತ್ತದೆ. ಈ ರೀತಿ ಸುಳ್ಳಿನ ಕೊನೆಗೊಳ್ಳದ ಸರಪಳಿ ರಚಿಸಲ್ಪಡುತ್ತದೆ. ಲ್ಲಾಹನು ಪವಿತ್ರ ಖುರ್‌ಆನ್ ವಚನಗಳಲ್ಲಿ ಪತಿ ಪತ್ನಿಯರಿಗೆ ಸಂಬಂಧಿಸಿ ಹೇಳಿರುವುದೇನೆಂದರೆ ವಿವಾಹಕ್ಕೆ ಸಂಬಂಧಿಸಿದ ಮಾತುಕತೆಗಳಲ್ಲಿ ಸತ್ಯದ ಅತ್ಯುನ್ನತ ಮಟ್ಟವನ್ನು ಅವಲಂಬಿಸಬೇಕು. ಯಾವುದೇ ರೀತಿಯ ಅಸ್ಪಷ್ಟತೆ ಇರಬಾರದು. ಹೀಗೆ ಮಾಡಿದರೆ ಪತಿ ಪತ್ನಿಯರ ವೈವಾಹಿಕ ಜೀವನ ಸಂತೋಷಭರಿತವಾಗುವುದು. ನಿಮ್ಮ ಮಕ್ಕಳು ಸಹ ಅನೇಕ ಸಮಸ್ಯೆಗಳಿಂದ ರಕ್ಷಿಸಲ್ಪಡುವರು. ಅಲ್ಲಾಹನು ನಿಮ್ಮ ಪಾಪಗಳನ್ನು ಕ್ಷಮಿಸುವನು ಮತ್ತು ಬೃಹತ್ತಾದ ಜಯವನ್ನು ದಯಪಾಲಿಸುವನು. ಇದು ಇಸ್ಲಾಮಿನ ಸುಂದರ ಆಜ್ಞೆಯಾಗಿದೆ. ಆದರೆ ಈ ಆಜ್ಞೆ ನೀಡಲ್ಪಟ್ಟರೂ ನೇರವಾದ ಮಾತನ್ನು ಆಡದವರಿಗಿಂತ ಹೆಚ್ಚು ದುರದೃಷ್ಟಶಾಲಿಗಳು ಬೇರೆ ಯಾರಿದ್ದಾರೆ?

ನಾವು ನಮ್ಮ ಸತ್ಯ ಸಂಧತೆಯ ಮಟ್ಟವನ್ನು ಪರಿಶೋಧಿಸಬೇಕಾಗಿದೆ. ಅವುಗಳ ಬಗ್ಗೆ ದೃಷ್ಟಿಯಿರಿಸುವ

ಆವಶ್ಯಕತೆ ಇದೆ. ಅಲ್ಲಾಹನು ಸಾಕ್ಷ್ಯ ನೀಡುವ ಬಗ್ಗೆ ಸಹ ಹೇಳುತ್ತಾನೆ: ಸುಳ್ಳು ಸಾಕ್ಷ್ಯ ಹೇಳಬಾರದು ಎಂದು. ಅಲ್ಲಾಹನು ಇಬಾದುರ್ರಹ್ಮಾನ್ (ರಹ್ಮಾನ್ ಆಗಿರುವ ಅಲ್ಲಾಹನ ದಾಸರ) ಬಗ್ಗೆ ಹೇಳುತ್ತಾನೆ: وَالَّذِينَ لَا يَشْهَدُونَ الزُّورَ **ವಲ್ಲದೀನ ಲಾ ಯಶ್‌ಹದೂನ ಝ್ಝೂರ.** ಅವರು ಸುಳ್ಳು ಸಾಕ್ಷಿ ಹೇಳುವವರಲ್ಲ. (25:73) ರಹ್ಮಾನ್ ಆಗಿರುವ ಅಲ್ಲಾಹನ ದಾಸರಾಗಲು ನಾವು ಇಚ್ಛಿಸುವುದಾದರೆ ಮತ್ತು ನಮ್ಮ ವಿಶ್ವಾಸ ವರ್ಧಿಸಬೇಕು ಎಂದು ಬಯಸುವುದಾದರೆ ಸುಳ್ಳಿನಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು.

ನಮ್ಮ ಸತ್ಯಸಂಧತೆಯ ಮಟ್ಟ ಹೇಗಿರಬೇಕು ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಕೊಲೆ ಮಾಡಬಾರದು ಎಂದು ನಿಮಗೆ ಉಪದೇಶಿಸುವ ಆವಶ್ಯಕತೆ ಇದೆ ಎಂದು ನಾನು ಭಾವಿಸುವುದಿಲ್ಲ. ಅತ್ಯಂತ ಉದ್ಧಟನಾದ ಮನುಷ್ಯನ ಹೊರತು ಬೇರೆ ಯಾರು ಅನ್ಯಾಯದಿಂದ ಹತ್ಯೆ ಮಾಡಲು ಹೆಜ್ಜೆ ಹಾಕುತ್ತಾನೆ? ಆದರೆ ನಾನು ಹೇಳುತ್ತೇನೆ ಅನ್ಯಾಯದ ಬಗ್ಗೆ ಹಟ ತೋರಿಸಿ ಸತ್ಯವನ್ನು ಹತ್ಯೆ ಮಾಡಬೇಡಿರಿ. ಸತ್ಯವನ್ನು ಒಬ್ಬ ಮಗು ಹೇಳಿದರೂ ಅದನ್ನು ಅಂಗೀಕರಿಸಿರಿ. ಸತ್ಯದಲ್ಲಿ ನಿಲ್ಲಿರಿ. ಸತ್ಯವಾದ ಸಾಕ್ಷ್ಯ ನೀಡಿರಿ. ಅಲ್ಲಾಹನು ಹೇಳಿದ್ದಾನೆ: **ವಜ್‌ತನಿಬುರ್ರಿಜ್‌ಸ ಮಿನಲ್ ಅವ್‌ಸಾನಿ ವಜ್‌ತನಿಬು ಖೌಲಝ್ಝೂರ್.** ವಿಗ್ರಹಗಳ ಕೊಳಕಿನಿಂದ ರಕ್ಷಿಸಿಕೊಳ್ಳಿರಿ ಮತ್ತು ಸುಳ್ಳಿನಿಂದಲೂ ರಕ್ಷಿಸಿಕೊಳ್ಳಿರಿ. ಸುಳ್ಳು ವಿಗ್ರಹಕ್ಕಿಂತ ಕಡಿಮೆಯಾದುದೇನೂ ಅಲ್ಲ. ನಿಮ್ಮನ್ನು ನೇರವಾದುದನ್ನು ಅಭಿಮುಖೀಕರಿಸುವುದರಿಂದ ತಿರುಗಿಸುವಂತಹದೇ ನೀವು ಪೂಜಿಸುವ ವಿಗ್ರಹವಾಗಿದೆ. ನೀವು ಸತ್ಯವಾದ ಸಾಕ್ಷ್ಯ ಹೇಳಿರಿ– ಅದು ನಿಮ್ಮ ತಂದೆ, ಸಹೋದರ ಮತ್ತು ಸ್ನೇಹಿತನ ವಿರುದ್ಧವಾಗಿದ್ದರೂ ಸಹ. ಅಲ್ಲಾಹನು ಹೇಳುತ್ತಾನೆ: يَا أَيُّهَا الَّذِينَ آمَنُوا كُونُوا قَوَّامِينَ بِالْقِسْطِ شُهَدَاءَ لِلَّهِ وَلَوْ عَلَىٰ أَنفُسِكُمْ أَوِ الْوَالِدَيْنِ وَالْأَقْرَبِينَ **ಯಾ ಅಯ್ಯುಹಲ್ಲದೀನ ಆಮನೂ ಕೂನೂ ಖವ್ವಾಮೀನ ಬಿಲ್ ಖಿಸ್ತಿ ಶುಹದಾಅ ಲಿಲ್ಲಾಹಿ ವಲವ್ ಅಲಾ ಅನ್‌ಫುಸಿಕುಮ್ ಅವಿಲ್ ವಾಲಿದೈನಿ ವಲ್ ಅಖ್‌ರಬೀನ್.** ಓ ವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ. ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. (4:136). ಇದು ಸತ್ಯಸಂಧತೆಯ ಉನ್ನತ ಮಟ್ಟವಾಗಿದೆ. ನಿಸ್ಸಂಶಯವಾಗಿಯೂ ಇದು ನ್ಯಾಯ ಪಾಲನೆಯ ಉನ್ನತ ಮಟ್ಟವೂ ಆಗಿದೆ. ಆದರೆ ಸತ್ಯಸಂಧತೆ ಇಲ್ಲದಿರುವಾಗ ನ್ಯಾಯಪಾಲನೆ ಆಗಲಾರದು. ಇವು ಒಬ್ಬ ಸತ್ಯವಿಶ್ವಾಸಿಗೆ ಆವಶ್ಯಕವಾದ ನೈತಿಕ ಮಟ್ಟಗಳಾಗಿವೆ.

ಸತ್ಯಸಂಧತೆ ಇಲ್ಲದೆ ನ್ಯಾಯಪಾಲನೆ ಆಗಲಾರದು ಎಂಬುದರ ಬಗ್ಗೆ ಅಲ್ಲಾಹನು ಹೀಗೆ ಹೇಳಿದ್ದಾನೆ: لَا يَجْرِمَنَّكُمْ شَنَآنُ قَوْمٍ أَن صَدُّوكُمْ عَنِ الْمَسْجِدِ الْحَرَامِ أَن تَعْتَدُوا ۘ وَتَعَاوَنُوا عَلَى الْبِرِّ وَالتَّقْوَىٰ **ಲಾಯಜ್‌ರಿಮನ್ನಕುಮ್ ಶನಆನು ಖೌಮಿನ್ ಅನ್ ಸದ್ದೂಕುಮ್ ಅನಿಲ್ ಮಸ್‌ಜಿದಿಲ್ ಹರಾಮಿ ಅನ್ ತಅತದೂ, ವ ತಆವನೂ ಅಲಲ್ ಬಿರ್ರಿ ವತ್ತಖ್ವಾ.** ಎಂದರೆ ಶತ್ರುಗಳ ಶತ್ರುತ್ವ ನಿಮ್ಮನ್ನು ನ್ಯಾಯ ಪಾಲನೆ ಮಾಡುವುದರಿಂದ ತಡೆಯುವುದಾಗಬಾರದು. ನೀವು ನ್ಯಾಯ ಪಾಲನೆ ಮಾಡುವುದರಲ್ಲಿ ನೆಲೆ ನಿಲ್ಲಿರಿ. ತಖ್ವ ಇರುವುದು ಅದರಲ್ಲಿಯೇ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಸತ್ಯವಾಗಿ ಹೇಳುತ್ತೇನೆ, ಶತ್ರುವಿನೊಂದಿಗೆ ಗೌರವದೊಂದಿಗೆ ವರ್ತಿಸುವುದು ಸುಲಭವಾಗಿದೆ. ಆದರೆ ಶತ್ರುವಿನ ಹಕ್ಕುಗಳನ್ನು ಸಂರಕ್ಷಿಸುವುದು ಅವನ ವಿರುದ್ಧ ಮೊಕದ್ದಮೆಗಳಲ್ಲಿ ನ್ಯಾಯ ಪಾಲನೆ ಮಾಡುವುದು ಬಹಳ ಕಷ್ಟದ ಕೆಲಸವಾಗಿದೆ. ಕೇವಲ ಶೂರರು ಹಾಗೆ ಮಾಡಬಲ್ಲರು. ಅಲ್ಲಾಹನು ಈ ವಚನದಲ್ಲಿ ಪ್ರೀತಿ ಬಗ್ಗೆ ಹೇಳಿಲ್ಲ. ಆದರೆ ಪ್ರೀತಿಯ ಉನ್ನತ ಮಟ್ಟದ ಬಗ್ಗೆ ಹೇಳಿದ್ದಾನೆ. ಏಕೆಂದರೆ ಒಬ್ಬನು ತನ್ನ ಕಠಿಣ ಶತ್ರುವಿನೊಂದಿಗೆ ನ್ಯಾಯಪೂರ್ಣವಾಗಿ ವರ್ತಿಸುವುದಾದರೆ ಸತ್ಯವಾದ ಪ್ರೀತಿ ಎನ್ನುವುದು ಸಹ ಅದನ್ನೇ ಆಗಿದೆ.

ಆದುದರಿಂದ ಓರ್ವ ಸತ್ಯವಿಶ್ವಾಸಿಯ ಸತ್ಯಸಂಧತೆಯ ಮಟ್ಟ ಹೇಗಿರಬೇಕೆಂದರೆ ಅವನು ತನ್ನ ಶತ್ರುವಿಗೆ ಸಹ ಹಾನಿ ಉಂಟುಮಾಡುವ ಉದ್ದೇಶದಿಂದ ಸುಳ್ಳು ಹೇಳಲಾರನು. ಶತ್ರುವಿನೊಂದಿಗೆ ವರ್ತಿಸುವ ರೀತಿ ಹೀಗಾದರೆ, ಸತ್ಯವಿಶ್ವಾಸಿಗಳ ಪರಸ್ಪರ ಸಂಬಂಧದಲ್ಲಿ ಸತ್ಯ ಸಂಧತೆಯ ಮಟ್ಟ ವರ್ಧಿಸುವ ಕಾರಣದಿಂದ ಪ್ರೀತಿಸುವ ಮಟ್ಟವೂ ವರ್ಧಿಸುವುದು. ಪ್ರೀತಿಯಲ್ಲಿ ಸುಳ್ಳು ಇರಲಾರದು. ಅಲ್ಲಾಹನು ನಮಗೆಲ್ಲರಿಗೂ ಈ ವಿಷಯವನ್ನು ಮನವರಿಕೆ ಮಾಡುವ ಭಾಗ್ಯ ನೀಡಲಿ. ಸತ್ಯಸಂಧತೆಯಿಂದ ಮುಂದೆ ಸಾಗಿ ಖೌಲೇಸದೀದ್ (ನೇರ ನುಡಿಗಳಲ್ಲಿ) ನೆಲೆ ನಿಲ್ಲುವ ಭಾಗ್ಯ ದಯಪಾಲಿಸಲಿ – ಆಮೀನ್.

ಸತ್ಯವಿಶ್ವಾಸಿಯಲ್ಲಿರಬೇಕಾದ ಇನ್ನೊಂದು ಮುಖ್ಯ ಸದ್ಗುಣವೇನೆಂದರೆ ಅದು ವಿನಯವಾಗಿದೆ. ಅದು ಅಲ್ಲಾಹನ ಸಾಮೀಪ್ಯವನ್ನು ದಯಪಾಲಿಸುತ್ತದೆ. ಅಹಂಭಾವದಿಂದ ದೂರ ಸರಿಯುವಂತೆ ಆ ಸದ್ಗುಣ ಮಾಡುತ್ತದೆ. ಅಹಂಭಾವದಿಂದ ವರ್ತಿಸುವವರ ಬಗ್ಗೆ ಅಲ್ಲಾಹನು ಹೀಗೆ ಹೇಳುತ್ತಾನೆ: وَلَا تُصَعِّرْ خَدَّكَ لِلنَّاسِ وَلَا تَمْشِ فِي الْأَرْضِ مَرَحًا ۖ إِنَّ اللَّهَ لَا يُحِبُّ كُلَّ مُخْتَالٍ فَخُورٍ **ವಲಾ ತುಸಯ್ಯಿರ್ ಖದ್ದಕ ಲಿನ್ನಾಸಿ ವಲಾ ತಮ್‌ಶಿ ಫಿಲ್‌ಅರ್‌ಝಿ ಮರಹನ್, ಇನ್ನಲ್ಲಾಹ ಲಾಯುಹಿಬ್ಬು ಕುಲ್ಲ ಮುಖ್‌ತಾಲಿನ್ ಫಖೂರ್.** ನೀನು ಅಹಂಭಾವದಿಂದ ಜನರ ಮುಂದೆ ಕೆನ್ನೆಗಳನ್ನು ಉಬ್ಬಿಸಬೇಡ. ಬಿಗುಮಾನದಲ್ಲಿ ನೀನು ಭೂಮಿಯ ಮೇಲೆ ನಡೆಯಬೇಡ. ಖಂಡಿತವಾಗಿಯೂ ಅಲ್ಲಾಹನು ದುರಹಂಕಾರಿಯನ್ನೂ ಡಂಬಾಚಾರಿಯನ್ನೂ ಪ್ರೀತಿಸುವುದಿಲ್ಲ. (31:19). ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಿರಿ, ಅಹಂಭಾವ ಶೈತಾನನಿಂದ ಬಂದಿದೆ. ಅದು ಮನುಷ್ಯನನ್ನು ಶೈತಾನನ್ನಾಗಿ ಮಾಡುತ್ತದೆ. ಮನುಷ್ಯನು ಅದರಿಂದ ದೂರ ಸರಿಯುವ

ತನಕ ಸತ್ಯವನ್ನು ಸ್ವೀಕರಿಸುವ ಮತ್ತು ಅಲ್ಲಾಹನ ಅನುಗ್ರಹ ಗಳಿಸುವ ಮಾರ್ಗದಲ್ಲಿ ಅದು ತಡೆಯಾಗುತ್ತದೆ. ಯಾವುದೇ ರೀತಿಯಲ್ಲಿ ಅಹಂಭಾವ ಪ್ರಕಟಿಸಬಾರದು. ವಿದ್ಯೆಗೆ ಸಂಬಂಧಿಸಿ, ಸಂಪತ್ತಿಗೆ ಸಂಬಂಧಿಸಿ, ಘನತೆಗೆ ಸಂಬಂಧಿಸಿ, ಜಾತಿಗೆ ಸಂಬಂಧಿಸಿ, ಕುಟುಂಬಕ್ಕೆ ಸಂಬಂಧಿಸಿ, ವಂಶಕ್ಕೆ ಸಂಬಂಧಿಸಿ ಅಹಂಭಾವ ಪ್ರಕಟಿಸಬಾರದು. ಹೆಚ್ಚಾಗಿ ಈ ವಿಷಯಗಳಿಗೆ ಸಂಬಂಧಿಸಿ ಅಹಂಭಾವ ಪ್ರಕಟಿಸಲಾಗುತ್ತಿವೆ. ಮನುಷ್ಯನು ತನ್ನ ಹೆಮ್ಮೆಯಿಂದ ಎಂದಿನ ತನಕ ಮುಕ್ತನಾಗುವುದಿಲ್ಲವೋ ಅಂದಿನ ತನಕ ಅವನು ಅಲ್ಲಾಹನಿಂದ ಆಯ್ಕೆಗೊಂಡವನಾಗಲಾರನು. ಶೈತಾನನು ಸಹ ಅಹಂಭಾವ ಪ್ರಕಟಿಸಿದ್ದನು. ಅವನು ತನ್ನನ್ನು ಆದಮ್‌ರಿಗಿಂತ ಉತ್ತಮನೆಂದು ಭಾವಿಸಿ ಹೇಳಿದನು– أَنَا خَيْرٌ مِّنْهُ خَلَقْتَنِي مِن نَّارٍ وَخَلَقْتَهُ مِن طِينٍ **ಅನ ಖೈರುನ್ ಮಿನ್‌ಹು ಖಲಖ್‌ತನೀ ಮಿನ್ ನಾರಿನ್ ವಖಲಖ್ತಹೂ ಮಿನ್ ತೀನ್.** ನಾನು ಅವನಿಗಿಂತ ಉತ್ತಮನಾಗಿದ್ದೇನೆ. ನೀನು ನನ್ನನ್ನು ಅಗ್ನಿಯಿಂದ ಸೃಷ್ಟಿಸಿದೆ. ಅವನನ್ನು ನೀನು ಆವೆಮಣ್ಣಿನಿಂದ ಸೃಷ್ಟಿಸಿದೆ.

ಶೈತಾನನ ಅಹಂಭಾವದ ಪರಿಣಾಮವಾಗಿ ಅವನು ಅಲ್ಲಾಹನ ಸನ್ನಿಧಿಯಿಂದ ದೂರ ಸರಿಸಲ್ಪಟ್ಟನು. ಆದಮ್ ತನ್ನ ಬಲಹೀನತೆಯನ್ನು ಅಲ್ಲಾಹನೊಂದಿಗೆ ಹೇಳಿಕೊಂಡರು ಮತ್ತು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾದರು. ಅಲ್ಲಾಹನ ಅನುಗ್ರಹವಿಲ್ಲದೆ ಏನೂ ಆಗಲಾರದು ಎಂದು ಆದಮರಿಗೆ ತಿಳಿದಿತ್ತು. ಅವರು ಪ್ರಾರ್ಥಿಸಿದರು: رَبَّنَا ظَلَمْنَا أَنفُسَنَا وَإِن لَّمْ تَغْفِرْ لَنَا وَتَرْحَمْنَا لَنَكُونَنَّ مِنَ الْخَاسِرِينَ **ರಬ್ಬನಾ ಝುಲಮ್‌ನಾ ಅನ್‌ಫುಸನಾ ವಇನ್ ಲಮ್ ತಗ್‌ಫಿರ್‌ಲನಾ ವತರ್‌ಹಮ್‌ನಾ ಲನಕೂನನ್ನ ಮಿನಲ್ ಖಾಸಿರೀನ್.** ನಮ್ಮ ಪಭೂ, ನಾವೇ ನಮ್ಮ ಮೇಲೆ ಅಕ್ರಮವಾಗಿ ವರ್ತಿಸಿದೆವು. ನೀನು ನಮ್ಮನ್ನು ಕ್ಷಮಿಸಿ ನಮ್ಮ ಮೇಲೆ ಕರುಣೆ ತೋರಿಸದಿದ್ದರೆ ಖಂಡಿತವಾಗಿಯೂ ನಾವು ನಷ್ಟಹೊಂದಿದವರಾಗುವೆವು. (7:24).

ಈ ಪ್ರಾರ್ಥನೆ ನಾವು ಮಾಡುತ್ತಾ ಇರಬೇಕು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಜಮಾಅತಿಗೆ ಉಪದೇಶಿಸಿದ್ದಾರೆ. ಈಗ ರಮಝಾನಿನ ಕೊನೆಯ ಹತ್ತು ದಿನಗಳನ್ನು ನಾವು ದಾಟಿಹೋಗುತ್ತಿದ್ದೇವೆ. ಅಗ್ನಿಯಿಂದ ರಕ್ಷಣೆ ಪಡೆಯಲು ಮತ್ತು ಅಲ್ಲಾಹನ ಕಾರುಣ್ಯ ಗಳಿಸಲು ಈ ಪ್ರಾರ್ಥನೆಗಳನ್ನು ಮಾಡುತ್ತಾ ಇರಬೇಕಾದುದು ಬಹಳ ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸತ್ಯವಾದ ದೈವಿಕ ಜ್ಞಾನವೆಂದರೆ ಮನುಷ್ಯನು ತನ್ನನ್ನು ಏನೂ ಅಲ್ಲವೆಂದು ಗಣಿಸಿ ಅಲ್ಲಾಹನ ಆಸ್ಥಾನದಲ್ಲಿ ಬಿದ್ದು ವಿನಯದಿಂದ ಅಲ್ಲಾಹನ ಅನುಗ್ರಹವನ್ನು ಬೇಡಿಕೊಳ್ಳುವುದರ ಹೆಸರಾಗಿದೆ. ಇಂದ್ರಿಯಾಸಕ್ತಿಗಳನ್ನು ಸುಟ್ಟು ಹಾಕುವ ಜ್ಞಾನದ ಪ್ರಕಾಶವನ್ನು ಬೇಡಬೇಕು. ಅದು ಮನುಷ್ಯನೊಳಗೆ ಒಂದು ಪ್ರಕಾಶವನ್ನೂ ಒಳಿತುಗಳನ್ನೂ ಮಾಡಲು ಶಕ್ತಿಯನ್ನೂ ಉತ್ಸಾಹವನ್ನೂ ಉಂಟುಮಾಡುತ್ತದೆ. ವಾಸ್ತವಿಕವಾಗಿ ಇಂದ್ರಿಯಾಸಕ್ತಿಗಳೆಂಬ ಕೊಳೆ ಮತ್ತು ಅಹಂಭಾವ ಮತ್ತು ಹೆಮ್ಮೆ ಎಂಬ ದುಸ್ವಭಾವಗಳು ಹೇಗಿವೆ ಎಂದರೆ ಅಲ್ಲಾಹನ ಅನುಗ್ರಹ ಲಭಿಸುವ ತನಕ ಅವುಗಳಿಗೆ ಸಾವು ಉಂಟಾಗಲಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ, ತಾವು ತಮ್ಮ ಸತ್ಕರ್ಮಗಳ ಕಾರಣದಿಂದ ಸ್ವರ್ಗವನ್ನು ಪ್ರವೇಶಿಸುವಿರೋ ಎಂದು ಕೇಳಿದಾಗ ಅವರು ಹೇಳಿದರು: ಖಂಡಿತವಾಗಿಯೂ ಇಲ್ಲ. ಅಲ್ಲಾಹನ ಅನುಗ್ರಹದಿಂದ ಮಾತ್ರ ಪ್ರವೇಶಿಸುವೆನು ಎಂದು. ಪ್ರವಾದಿಗಳು ಎಂದೂ ಶಕ್ತಿ ಸಾಮರ್ಥ್ಯಗಳನ್ನು ತಮ್ಮದೆಂದು ಹೇಳುವುದಿಲ್ಲ. ಅವರು ಆ ಶಕ್ತಿ ಸಾಮರ್ಥ್ಯಗಳನ್ನು ಅಲ್ಲಾಹನಿಂದ ಪಡೆಯುತ್ತಾರೆ ಮತ್ತು ಅವರು ಅಲ್ಲಾಹನ ಹೆಸರನ್ನೇ ಹೇಳುತ್ತಾರೆ.

ಅಲ್ಲಾಹನ ವಿಶಿಷ್ಟ ದಾಸರಾದ ಪ್ರವಾದಿಗಳ ಸ್ಥಿತಿ ಹೀಗಿರುವಾಗ ಒಬ್ಬ ಸಾಮಾನ್ಯ ಮನುಷ್ಯ ಎಷ್ಟು ವಿನಯ ತೋರಿಸಬೇಕು? ಅಲ್ಲಾಹನ ಅನುಗ್ರಹಗಳ ಬಗ್ಗೆ ಕೃತಜ್ಞತೆ ತೋರಿಸುತ್ತಾ ಇನ್ನಷ್ಟು ಬಾಗುತ್ತಾ ಇರಬೇಕು. ಅಲ್ಲಾಹನು ನಮಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳನ್ನು ಅನುಸರಿಸಿ ಮತ್ತು ಅವರು ತೋರಿಸಿದ ಮಾರ್ಗದ ಪ್ರಕಾರ ನಡೆಯುತ್ತಾ ಎಲ್ಲ ಕೆಡುಕುಗಳಿಂದ ನಮ್ಮನ್ನು ರಕ್ಷಿಸಲು ಮತ್ತು ಎಲ್ಲ ಉನ್ನತ ಸದ್ಗುಣಗಳನ್ನು ಗಳಿಸಲು ಭಾಗ್ಯ ನೀಡಲಿ. ನಮ್ಮ ಸತ್ಯಸಂಧತೆಯು ಅಲ್ಲಾಹನ ಸಾಮೀಪ್ಯ ಒದಗಿಸುವ ಮಟ್ಟವನ್ನು ತಲಪುವಂತಾಗಲಿ. ನಾವು ಅಲ್ಲಾಹನಿಗೆ ಇಷ್ಟಕರವಾದ ರೀತಿಯಲ್ಲಿ ವಿನಯವಂತರಾಗಲು ತೌಫೀಕ್ ನೀಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಜಮಾಅತಿನ ಸದಸ್ಯರನ್ನು ಯಾವ ರೀತಿ ಕಾಣಲು ಬಯಸಿದರೋ ಆ ರೀತಿಯಲ್ಲಿ ಅಲ್ಲಾಹನು ನಮ್ಮನ್ನು ಮಾಡಲಿ – ಆಮೀನ್.

—————————*****—————————


***Friday Sermon delivered by Hadrath Khaleefatul Masih Al Khamis***(*atba*)

*At, Masjid Baithul Futhuh, London on 16-06-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon